ಈ ಕಥೆ ಮಹಾಭಾರತದಲ್ಲಿದೆ. ಮೇಲ್ನೋಟಕ್ಕೆ ಸರಳವಾಗಿ ಕಾಣುವ ಈ ಕಥೆಗೆ ಹಲವು ಆಯಾಮಗಳ ಅರ್ಥವಿಸ್ತಾರವಿದೆ. ಸಾವಿರಾರು ವರ್ಷಗಳ ಹಿಂದೆ ತೋರಿಕೊಂಡಿರುವ ಈ ಕಥೆ ನಮ್ಮ ಇಂದಿನ ಸ್ಥಿತಿಗತಿಗಳನ್ನು ಬಹಳ ಚೆನ್ನಾಗಿ ಪ್ರಕಟಪಡಿಸುವಂತಿದೆ.

ತಪಸ್ಸು ಎಂದರೆ ದೇಹವನ್ನು ದಂಡಿಸುವುದು ಎಂದು ಅರ್ಥಮಾಡಿಕೊಳ್ಳಲಾಗುತ್ತದೆ. ಆದರೆ ಅದಷ್ಟೇ ತಪಸ್ಸಲ್ಲ. ದೇಹವನ್ನೂ ಮನಸ್ಸನ್ನೂ ಸ್ವಾಸ್ಥ್ಯಸ್ಥಿತಿಯಲ್ಲಿ ನಿಲ್ಲಿಸಬಲ್ಲ ಎಲ್ಲ ಪ್ರಕ್ರಿಯೆಗಳೂ ತಪಸ್ಸೇ ಹೌದು. ಮಾತು, ಮನಸ್ಸು ಮತ್ತು ಬುದ್ಧಿಗಳು ಒಟ್ಟಾಗಿ ಹೊಂದಾಣಿಕೆಯನ್ನು ಸಾಧಿಸಿದರೆ ಮಾತ್ರವೇ ಈ ಪ್ರಕ್ರಿಯೆ ನಡೆಯಲು ಸಾಧ್ಯ. ಇಡಿಯ ನಮ್ಮ ವ್ಯಕ್ತಿತ್ವವನ್ನು ಕಾವಿಗೆ ಒಡ್ಡಿಕೊಳ್ಳುವ ಪರೀಕ್ಷೆಯೇ ತಪಸ್ಸು. ಅದಿರಿನಲ್ಲಿರುವ ಕಶ್ಮಲಗಳಿಂದ ಶುದ್ಧವಾದ ಲೋಹವು ಬಿಡುಗಡೆಯನ್ನು ಪಡೆಯಬೇಕಾದರೆ ಅದಕ್ಕೆ ಬೆಂಕಿಯ ಸ್ಪರ್ಶ ಬೇಕು; ಬೆಂಕಿಯಲ್ಲಿ ಅದಿರು ಮುಳಗಬೇಕು. ಹೀಗೆಯೇ ಮಾತು–ಮನಸ್ಸು–ಬುದ್ಧಿಗಳಿಗೆ ಒದಗಿರುವ ಕಲ್ಮಷಗಳಿಂದ ಬಿಡುಗಡೆಗೊಳಿಸುವ ಸಾಧನೆಯ ಕಾವೇ ತಪಸ್ಸು. ನಮ್ಮ ಮಾತಾಗಲೀ ಮನಸ್ಸಾಗಲೀ ಬುದ್ಧಿಯಾಗಲೀ ಪ್ರತಿ ಕ್ಷಣವೂ ಕಲುಷಿತಗೊಳ್ಳಬಲ್ಲಂಥ ಸ್ಥಿತಿಯಲ್ಲಿರುತ್ತವೆ. ಹೊರಗಿನ ಆಮಿಷಗಳು ಅವನ್ನು ಆರೋಗ್ಯವಾಗಿಡಲು ಬಿಡುವುದಿಲ್ಲ. ಹೀಗೆ ಒಂದೊಂದು ಕ್ಷಣವೂ ನಮಗೆ ಎದುರಾಗುತ್ತಲೇ ಇರುವ ಕೊಳೆಗಳನ್ನು ಸುಟ್ಟುಹಾಕುವ ಎಲ್ಲ ಸಾಧನೆಗಳೂ ತಪಸ್ಸು ಎನಿಸಿಕೊಳ್ಳುತ್ತದೆ.

ಒಂಟೆ ತಪಸ್ಸನ್ನೇನೋ ಮಾಡಿತು; ಕಠಿಣವಾದ ತಪಸ್ಸನ್ನೇ ಮಾಡಿತೆನ್ನಿ! ಆದರೆ ಆ ತಪಸ್ಸಿನ ಪ್ರತಿಫಲವಾಗಿ ಅದು ಬಯಸಿದ್ದು ಏನನ್ನು? ಅವಿವೇಕವನ್ನೇ ಅಲ್ಲವೆ? ಆ ಅವಿವೇಕವು ಕೊಂಡುಕೊಂಡದ್ದು ಅತ್ಯಾಶೆಯನ್ನು. ಆ ಅತಿಯಾದ ಆಸೆ ಹಂಬಲಿಸಿದ್ದು ಸೋಮಾರಿತನವನ್ನು. ಸೋಮಾರಿತನವು ಕೊನೆಗೆ ಫಲವಾಗಿ ಕೊಟ್ಟದ್ದು ಸಾವನ್ನು. ಹೀಗಾಗಿ ಒಂಟೆ ಮಾಡಿದ್ದು ದಿಟವಾದ ತಪಸ್ಸು ಅಲ್ಲ. ನಮ್ಮ ಹಿತವನ್ನು ಯಾವುದು ಕಾಪಾಡುತ್ತದೆಯೋ ಅದು ತಪಸ್ಸು; ನಮ್ಮ ಆರೋಗ್ಯವನ್ನು ಯಾವುದು ಉಳಿಸುತ್ತದೆಯೋ ಅದು ತಪಸ್ಸು; ನಮ್ಮ ಬದುಕಿಗೆ ಯಾವುದು ಅರ್ಥವನ್ನು ಒದಗಿಸುತ್ತದೆಯೋ ಅದು ತಪಸ್ಸು. ಆದರೆ ಒಂಟೆಯ ತಪಸ್ಸು ಈ ಮಾದರಿಯದ್ದು ಅಲ್ಲ; ಅದು ಅದರ ಜೀವವನ್ನೇ ಕಬಳಿಸಿತು. ಯಾವುದು ನಮ್ಮ ನಾಶಕ್ಕೆ ಕಾರಣವಾಗುತ್ತದೆಯೋ ಅದು ತಪಸ್ಸು ಹೇಗಾದೀತು? ರಾಕ್ಷಸರು ತಪಸ್ಸನ್ನು ಮಾಡುತ್ತಿದ್ದುದರ ವರ್ಣನೆಗಳನ್ನು ಪುರಾಣಗಳಲ್ಲಿ ಕಾಣಬಹುದು. ತುಂಬ ಕಠಿಣವಾದ ರೀತಿಯಲ್ಲಿ ಅವರು ತಪಸ್ಸನ್ನು ಮಾಡುತ್ತಿದ್ದರು. ಆದರೆ ಅವರು ಅದಕ್ಕೆ ವರವಾಗಿ ದೇವತೆಗಳಿಂದ ಕೇಳುತ್ತಿದ್ದುದು ಏನನ್ನು? ಅವರು ಕೇಳುತ್ತಿದ್ದುದು ಬದುಕನಲ್ಲ; ಸಾವನ್ನು. ಭಸ್ಮಾಸುರನ ಕಥೆಯನ್ನೇ ಇಲ್ಲಿ ಉದಾಹರಣೆಯಾಗಿ ತೆಗೆದುಕೊಳ್ಳಬಹುದು. ಅವನು ತಪಸ್ಸು ಮಾಡಿ ಶಿವನನ್ನೇ ಮೆಚ್ಚಿಸಿದ. ಶಿವ ಅವನ ಮುಂದೆ ಪ್ರತ್ಯಕ್ಷವಾದಾಗ ಅವನು ಕೇಳಿದ ವರ ಏನು? 'ಯಾರ ತಲೆಯ ಮೇಲೆ ನಾನು ಕೈಯನ್ನು ಇರಿಸುವೆನೋ ಅವರು ಆ ಕ್ಷಣದಲ್ಲಿಯೇ ಸುಟ್ಟು ಬೂದಿಯಾಗಬೇಕು.' ಇದು ಅವನು ಕೇಳಿದ ವರ. ಶಿವನೇನೋ ಅದೇ ವರವನ್ನು ಅವನಿಗೆ ಕೊಟ್ಟ. ವರವನ್ನು ಪಡೆದ ಆ ರಕ್ಕಸನ ಹೆಸರು 'ಭಸ್ಮಾಸುರ' ಎಂದೇ ಆಯಿತು. ವರವನ್ನು ಸಂಪಾದಿಸಿದ ಕೂಡಲೇ ಅವನು ಮಾಡಲು ಹೊರಟ ಕೃತ್ಯವಾದರೂ ಎಂಥದ್ದು? ವರವನ್ನು ಕೊಟ್ಟವನನ್ನೇ ಸುಡಲು ಮುಂದಾದದ್ದು! ಇದನ್ನು ಕೃತಘ್ನತೆ ಎನ್ನಬೇಕೆ? ಅಥವಾ ಮದ ಎನ್ನಬೇಕೆ? ಅಥವಾ ಅಜ್ಞಾನ ಎನ್ನಬೇಕೆ? ಅಥವಾ ಬೇರೆಯವರನ್ನು ಹಿಂಸಿಸಿ ಸಂತಸ ಪಡುವ ದುಷ್ಟತನ ಎನ್ನಬೇಕೆ? ಅಥವಾ ಇವೆಲ್ಲವೂ ಸೇರಿದ